# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಮೈ.1262/2017/ಸನಿಕಾಸ–2

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 11.1.2018.

ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

ವಿಷಯ:– ಶ್ರೀ ಹೆಚ್.ಸಿ.ರಮೇಶ್ ಗೌಡ, ರಾಜಕುಮಾರ್ ಬಡಾವಣೆ, ಮಂಡ್ಯ ಇವರ ದೂರಿನ ಮೇಲೆ ಕ್ರಮಕೈಗೊಳ್ಳುವ ಬಗ್ಗೆ.

*******

ಶ್ರೀ ಹೆಚ್.ಸಿ.ರಮೇಶ್ ಗೌಡ, ರಾಜಕುಮಾರ್ ಬಡಾವಣೆ, ಮಂಡ್ಯ ನಿವಾಸಿ, (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ (1) ಗ್ರೇಡ್.2 ತಹಶೀಲ್ದಾರ್, ಮಂಡ್ಯ ತಾಲ್ಲೂಕು, (2) ಸರ್ವೆಯರ್ ಮತ್ತು (3) ಸರ್ವೆ ಸೂಪರ್‌ವೈಸರ್, ಮಂಡ್ಯ ತಾಲ್ಲೂಕು, (ಇನ್ನು ಮುಂದೆ ಕ್ರಮವಾಗಿ 1ರಿಂದ 3ನೇ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

2. ದೂರಿನ ಸಂಕ್ಷಿಪ್ತ ವಿವರಣೆ:–

ದೂರಿನ ಸಂಕ್ಷಿಪ್ತ ಸಾರಾಂಶವೇನೆಂದರೆ, ದೂರುದಾರರು ಮಂಡ್ಯ ಗ್ರಾಮದ ಸ.ನಂ.25/9ಎ, 10ರಲ್ಲಿ 2.14 ಎಕರೆ ಜಮೀನನ್ನು ಹೊಂದಿದ್ದು, ಸದರಿ ಜಮೀನನ್ನು ಅಳತೆ ಮಾಡಲು ಕೋರಿ ಅರ್ಜಿ ಸಲ್ಲಿಸಿದ್ದರು. 1ನೇ ಎದುರುದಾರರು ಸದರಿ ಜಮೀನನ್ನು ಸರ್ವೆ ಮಾಡಲು ಶ್ರೀ ಶಿವಕುಮಾರ್, ಸರ್ವೆಯರ್ ಅವರಿಗೆ ನಿರ್ದೇಶಿಸಿದ್ದರೂ ಸಹ ಅಳತೆ ಮಾಡಿರುವುದಿಲ್ಲ. 2ನೇ ಎದುರುದಾರರಿಗೂ ಸಹ ನಂತರದಲ್ಲಿ ಆದೇಶ ಮಾಡಿದ್ದರೂ ಸಹ ಅವರು ಅಳತೆ ಮಾಡಿರುವುದಿಲ್ಲ. ಸರ್ವೆಯರ್ ಅಳತೆ ಮಾಡಿ ವರದಿ ಸಲ್ಲಿಸಲು ಮುಂದೂಡಿಕೊಂಡು ಬರುತ್ತಿದ್ದಾರೆಂದು ಆಪಾದಿಸಿರುತ್ತಾರೆ.

3. 1ನೇ ಎದುರುದಾರರು ನೋಟೀಸ್ ಜಾರಿಯಾದರೂ ಆಕ್ಷೇಪಣೆ ಸಲ್ಲಿಸಿರುವುದಿಲ್ಲ. 2ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದೂರುದಾರರ ಬಾಬ್ತು ಸ.ನಂ.25/9ಎ/10 ಜಮೀನನ್ನು ಅಳತೆ

ಮಾಡಲು ಕಡತವು ಬಂದಿತ್ತು. ಸದರಿ ಕಡತವನ್ನು ಶಾಖೆಯಿಂದ ಪಡೆದುಕೊಂಡು ಸದರಿ ಜಮೀನಿನ ಬಾಬ್ತು ಭೂದಾಖಲೆಗಳನ್ನು ಪಡೆದು ಅಳತೆ ಮಾಡಲು ಮೂಲ ಗ್ರಾಮದ ದಾಖಲೆಗಳನ್ನು ಪರಿಶೀಲಿಸಿದಾಗ, ದೂರುದಾರರ ಜಮೀನಿಗೆ ಸಂಬಂಧಿಸಿದಂತೆ ಭೂದಾಖಲೆಗಳು(ಸರ್ವೆ ದಾಖಲೆಗಳು)ಶಿಥಿಲಗೊಂಡಿದ್ದು ಲಭ್ಯವಿರುವುದಿಲ್ಲ ಹಾಗೂ ಗ್ರಾಮ ನಕಾಶೆಯಂತೆ ಸದರಿ ಸರ್ವೆ ನಂಬರಿನ ಪ್ರದೇಶವನ್ನು ಕಛೇರಿಯಲ್ಲಿ ಪರಿಶೀಲಿಸಿದಾಗ ಸದರಿ ಪ್ರದೇಶವು ಈಗಾಗಲೇ ಬಡಾವಣೆಯಾಗಿರುವ ಮಂಡ್ಯ ನಗರದ ಹೃದಯಭಾಗದಲ್ಲಿದ್ದು ಜಮೀನಿನ ಸ್ಥಿತಿಯಂತೆ ಸದರಿ ಸರ್ವೆ ನಂಬರಿನ ಹದ್ದುಬಸ್ತಿನ ಗಡಿಗುರುತುಗಳು ದಾಖಲೆಗಳಂತೆ ಜಮೀನು ಸ್ಥಿತಿಯಲ್ಲಿರುವುದಿಲ್ಲ. ಆದ್ದರಿಂದ ಸದರಿ ಪ್ರಕರಣದ ಕೆಲಸ ನಿರ್ವಹಿಸಲು ಅವಕಾಶವಾಗದ ಕಾರಣ ದಿ.20.4.2007ರಂದು ಕಛೇರಿಗೆ ಕಡತದ ಸಮೇತ ವರದಿ ಸಲ್ಲಿಸಿರುತ್ತಾರೆಂದು ಮತ್ತು ಸದರಿ ಪ್ರಕರಣದಲ್ಲಿ ತಾನು ಯಾವುದೇ ಕರ್ತವ್ಯಲೋಪವೆಸಗಿರುವುದಿಲ್ಲವೆಂದು ಹೇಳಿರುತ್ತಾರೆ.

4. 3ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಮಾನ್ಯ ತಹಶೀಲ್ದಾರರ ಕಛೇರಿಯಿಂದ ಬಂದ ಸೂಚನೆಯಂತೆ ದೂರುದಾರರ ಬಾಬ್ತು ಜಮೀನನ್ನು ಅಳತೆ ಮಾಡಲು ಶಿವಕುಮಾರ್, ಭೂಮಾಪಕರಿಗೆ ದಿ.10.5.2016ರಂದು ನೀಡಲಾಗಿತ್ತು. ಸದರಿ ಶಿವಕುಮಾರ್ ಮಾನ್ಯ ಆಯುಕ್ತರು ಭೂಮಾಪನಕಂದಾಯ ವ್ಯವಸ್ಥೆ ಅಮತ್ತು ಭೂದಾಖಲೆಗಳ ಇಲಖೆ, ಅವರ ತುರ್ತು ಆದೇಶ ಸಂ.ಎಸ್.ಎಸ್.ಎಲ್.ಆರ್./ಟಿ.ಎನ್.ಎಲ್.ಮಿಸ್.182(2014-15) ರಂತೆ ದಿ.30.5.2016ರಂತೆ ಸರ್ಕಾರದ ಯೋಜನೆಯಾದ ಪೋಡಿ ಮುಕ್ತ ಗ್ರಾಮ ಅಭಿಯಾನದ ಯೋಜನೆಗೆ ಶಿವಕುಮಾರ್ ಅವರನ್ನು ನಿಯೋಜಿಸಿದ್ದರಿಂದ ಸದರಿಯವರು ದೂರುದಾರರ ಜಮೀನಿನಳತೆ ಮಾಡಲು ಆಗುವುದಿಲ್ಲವೆಂದು ಕಡತವನ್ನು ವಾಪಸ್ಸು ನೀಡಿರುತ್ತಾರೆ. ನಂತರ 2ನೇ ಎದುರುದಾರರಿಗೆ ಸದರಿ ಜಮೀನನ್ನು ಅಳತೆ ಮಾಡಲು ಕಡತವನ್ನು ನೀಡಿದಾಗ ಸದರಿಯವರು ದಾಖಲೆಗಳನ್ನು ಪರಿಶೀಲಿಸಿ ಭೂದಾಖಲೆಗಳು ಶಿಥಿಲಗೊಂಡಿದ್ದು ಲಭ್ಯವಿರುವುದಿಲ್ಲ ಹಾಗೂ ಗ್ರಾಮ ನಕಾಶೆಯಂತೆ ಸದರಿ ಜಮೀನು ಸ್ಥಿತಿಯಲ್ಲಿರುವುದಿಲ್ಲ. ಈಗಾಗಲೇ ಸದರಿ ಜಮೀನು ಬಡಾವಣೆಯಾಗಿರುವ ಮಂಡ್ಯ ಗ್ರಾಮದ ಹೃದಯಭಾಗದಲ್ಲಿರುತ್ತದೆ. ಮತ್ತು ಗ್ರಾಮ ನಕ್ಷೆಯಂತೆ ದೂರುದಾರರ ಜಮೀನನ್ನು ಗುರುತಿಸಲಾಗುವುದಿಲ್ಲ ಎಂದು ತಿಳಿಸಿ ಕಡತವನ್ನು ವಾಪಸ್ಸು ನೀಡಿರುತ್ತಾರೆಂದು ಹೇಳಿರುತ್ತಾರೆ. ಆದ್ದರಿಂದ ಸದರಿ ಜಮೀನಿಗೆ ಸಂಬಂಧಿಸಿದ ಟಿಪ್ಪಣಿ, ಆಕಾರ್

ಬಂದ್, ಶಿಥಿಲಗೊಂಡಿದ್ದು, ಈ ಸಂಬಂಧ ಅರ್ಜಿದಾರರಿಗೆ ಸರ್ವೆ ನಂ.25/9ಎರಲ್ಲಿ ಎ–1, ಎ–2, ಎ–3 ಹಿಸ್ಸಾ ಪೋಡಿಯಾಗಿದ್ದು, ಸ.ನಂ.25/9ಎ10 ಸರ್ವೆ ದಾಖಲೆಗಳ ನಕಲುಗಳು ಇರುವುದಿಲ್ಲವೆಂದು ದಿ.18.8.2013ರಲ್ಲಿ ಹಿಂಬರಹ ನೀಡಲಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಸದರಿ ಪ್ರಕರಣದಲ್ಲಿ ಮತ್ತೊಮ್ಮೆ ಸಂಪೂರ್ಣವಾಗಿ ಪರಿಶೀಲಿಸಿ ವರದಿಸುವ ಬಗ್ಗೆ ತಾಲ್ಲೂಕು ಭೂಮಾಪಕರಾದ ಹೇಮರಾಜು ಅವರಿಗೆ ದಿ.3.5.2017ರಂದು ತುರ್ತು ಜ್ಞಾಪನನೀಡಿ ಕಡತ ವಿತರಿಸಲಾಗಿದೆಯೆಂದು ತಿಳಿಸಿರುತ್ತಾರೆ. ಸದರಿ ಭೂಮಾಪಕರಾದ ಹೇಮರಾಜು ಅವರು ಕೆಲಸ ನಿರ್ವಹಿಸಿ ವರದಿ ಸಲ್ಲಿಸಿದ ನಂತರ ಆದ್ಯತೆ ಮೇರೆಗೆ ಕಾನೂನು ರೀತಿಯಲ್ಲಿ ಕ್ರಮವಹಿಸುವುದಾಗಿ ತಿಳಿಸಿರುತ್ತಾರೆ. ಈ ಪ್ರಕಣದಲ್ಲಿ ತಾನು ಯಾವುದೇ ರೀತಿಯ ಕರ್ತವ್ಯಲೋಪ ಮಾಡಿರುವುದಿಲ್ಲವೆಂದು ತಿಳಿಸಿರುತ್ತಾರೆ.

5. ದೂರುದಾರರು ಪ್ರತ್ಯುತ್ತರದಲ್ಲಿ ಅವರ ಜಮೀನು 2.04 ಎಕರೆ ದಿ.22.12.1986ರಂದು ಜಿಲ್ಲಾಧಿಕಾರಿಗಳ ಆದೇಶದಂತೆ ಅನ್ಯಕ್ರಾಂತವಾಗಿರುತ್ತದೆ. ಅದಕ್ಕೆ ಮಂಡ್ಯ ತಹಶೀಲ್ದಾರರು 9–10/ 2/1987 ರಲ್ಲಿ ಹಿಂಬರಹ ನೀಡಿ ರಾಜಸ್ವ ನಿರೀಕ್ಷಕರಿಗೆ ಮತ್ತು ಪೋಡಿ ಶಾಖೆಗೆ ಮುಂದಿನ ಕ್ರಮಕ್ಕಾಗಿ ರವಾನಿಸಲಾಗಿದೆಯೆಂದು ತಿಳಿಸಿರುತ್ತಾರೆ. ದಿ.4.9.2017ರಂದು ದೂರುದಾರರು ಭೂದಾಖಲೆಗಳ ಸಹಾಯಕ ನಿರ್ದೇಶಕರು ಮಂಡ್ಯ ತಾ. ಅವರಿಗೆ ಅರ್ಜಿ ಸಲ್ಲಿಸಿದ್ದರಿಂದ ಭೂಮಾಪಕರು ಬಂದು ಅಳತೆ ಮಾಡಿದ ನಂತರ ಯಾವುದೇ ವಿಚಾರ ತಿಳಿಸಿರುವುದಿಲ್ಲ, 3ನೇ ಎದುರುದಾರರು ತಮ್ಮ ಕಛೇರಿಯಲ್ಲಿ ವಿವಾದಿತ ಜಮೀನಿಗೆ ಸಂಬಂಧಿಸಿದಂತೆ ದಾಖಲೆಗಳು ಶಿಥಿಲಗೊಂಡಿವೆಯೆಂದು ತಿಳಿಸಿರುತ್ತಾರೆ. ಆದರೆ ಸದರಿಯವರು ತಮ್ಮ ಮೇಲಾಧಿಕಾರಿಗಳಿಂದ ದಾಖಲೆಗಳನ್ನು ತರಿಸಿಕೊಂಡು ವಿಷಯವನ್ನು ಪರಿಶೀಲಿಸಿ ಆತನಿಗೆ ನ್ಯಾಯ ಕೊಡಿಸಬಹುದಿತ್ತು. ಆದರೆ, ಎದುರುದಾರರು ಯಾವುದೇ ಕ್ರಮಕೈಗೊಳ್ಳದೇ ಕರ್ತವ್ಯಲೋಪವೆಸಗಿದ್ದಾರೆಂದು ನುಡಿದಿರುತ್ತಾರೆ. ದೂರುದಾರರು ಮುಂದುವರೆದು 2 ವರ್ಷಗಳ ಹಿಂದೆ ಸದರಿ ಸರ್ವೆ ನಂಬರಿನಲ್ಲಿ ಅಕ್ಕಪಕ್ಕದ ಸೈಟಿನವರು ಆತನ ಜಾಗವನ್ನು ಒತ್ತುವರಿ ಮಾಡಿಕೊಂಡು ಮನೆ ಕಟ್ಟುತ್ತಿದ್ದಾರೆಂದು ಮಂಡ್ಯ ತಹಶೀಲ್ದಾರ್, ನಗರಾಭಿವೃದ್ಧಿ ಪ್ರಾಧಿಕಾರ, ನಗರ ಸಭೆ, ಮಂಡ್ಯ, ಪೂರ್ವ ಪೋಲೀಸ್ ಠಾಣೆ, ಮತ್ತು ಜಿಲ್ಲಾ ಪೋಲೀಸ್ ವರಿಷ್ಟಾಧಿಕಾರಿಗಳಿಗೆ ಮನವಿ ಸಲ್ಲಿಸಿರುತ್ತಾರೆಂದು ತಿಳಿಸಿರುತ್ತಾರೆ.

6. ದೂರು, ಆಕ್ಷೇಪಣೆ, ಪ್ರತ್ಯುತ್ತರ ಮತ್ತು ದಾಖಲೆಗಳನ್ನು ಪರಿಶೀಲಿಸಿದಾಗ, ದೂರುದಾರರ ಹೆಸರಿನಲ್ಲಿ ಸ.ನಂ.25/9ಎ10 2.04ಎಕರೆ ಜಮೀನು ಇರುವುದು ಕಂಡುಬರುತ್ತದೆ. ಆ ಬಗ್ಗೆ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿರುತ್ತಾರೆ. ಸದರಿ ಜಮೀನು ಅನ್ಯಕ್ರಾಂತ ಮಾಡಿರುತ್ತಾರೆಂದು ದಿ.22.12.1986ರ ಅಧಿಕೃತ ಜ್ಞಾಪನವನ್ನು ಹಾಜರುಪಡಿಸಿರುತ್ತಾರೆ. ಸದರಿ ಜ್ಞಾಪನಪತ್ರವನ್ನು ಪರಿಶೀಲಿಸಿದಾಗ, ತಹಶೀಲ್ದಾರರ ಕಛೇರಿಯಿಂದ ಹಿಂಬರಹ ನೀಡಿರುವುದು ಕಂಡುಬರುತ್ತದೆ. ಸದರಿ ಜಮೀನಿನ ಮಾಲೀಕರು ದೂರುದಾರರಾಗಿರುತ್ತಾರೆಂದು ದಾಖಲೆಗಳಿಂದ ಸ್ಪಷ್ಟವಾಗುತ್ತದೆ ಮತ್ತು ಆ ಬಗ್ಗೆ ಯಾವುದೇ ತಕರಾರಿರುವುದಿಲ್ಲ. ದೂರುದಾರರು ಹಾಜರುಪಡಿಸಿದ ದಾಖಲೆಗಳಿಂದ ದೂರುದಾರರ ಜಮೀನು ಮಂಡ್ಯ ನಗರಸಭೆ ವ್ಯಾಪ್ತಿಯಲ್ಲಿ ಬರುತ್ತದೆಂದು ಕಂಡುಬರುತ್ತದೆ. ಹಾಗೂ ಸದರಿ ಜಮೀನನ್ನು ದಿ.22.12.1986ರಲ್ಲಿ ಅನ್ಯಕ್ರಾಂತ ಮಾಡಿದ್ದು ಕಂಡುಬರುತ್ತದೆ. ಪಹಣಿ ಪತ್ರಿಕೆಯಂತೆ ಸದರಿ ಜಮೀನು ಕಂದಾಯ ಜಮೀನಾಗಿರುತ್ತದೆ. ಆದರೆ ಸದರಿ ಜಮೀನು ಈಗ ನಗರಸಭೆ ವ್ಯಾಪ್ತಿಯಲ್ಲಿ ಬಡಾವಣೆಯಲ್ಲಿ ಬರುತ್ತದೆ. ದೂರುದಾರರು ಸದರಿ ಜಮೀನನ್ನು ಅಕ್ಕಪಕ್ಕದ ನಿವೇಶನದಾರರು ಅತಿಕ್ರಮಣ ಮಾಡಿ ಮನೆ ಕಟ್ಟುತ್ತಿದ್ದಾರೆಂದು ತಹಶೀಲ್ದಾರರಿಗೆ ಹಾಗೂ ನಗರ ಯೋಜನಾಧಿಕಾರಿಗಳಿಗೆ ಹಾಗೂ ಇತರೆಯವರಿಗೆ ಈಗಾಗಲೇ ತಿಳಿಸಿರುತ್ತಾರೆ. ಎದುರುದಾರರ ನಂ.2 ಮತ್ತು 3ರವರು ತಿಳಿಸಿದಂತೆ ಸದರಿ ಜಮೀನಿನ ದಾಖಲೆಗಳು ಶಿಥಿಲಗೊಂಡಿದ್ದರಿಂದ ಮತ್ತು ಗಡಿಗುರುತು ಗ್ರಾಮ ನಕ್ಷೆಯಂತೆ ಕಂಡುಬರುತ್ತಿಲ್ಲವಾದ್ದರಿಂದ ಅಳತೆ ಮಾಡಲು ಅವಕಾಶವಾಗಿಲ್ಲವೆಂದು ತಿಳಿಸಿರುತ್ತಾರೆ. ದೂರುದಾರರ ಹೆಸರಿನಲ್ಲಿ ಜಮೀನಿನ ಪಹಣಿ ದಾಖಲೆಗಳು ಇರುವುದರಿಂದ ಕಂದಾಯ ಅಧಿಕಾರಿಗಳು ಮತ್ತು ನಗರ ಸಭೆಯ ಅಧಿಕಾರಿಗಳ ಹಾಗೂ ಸರ್ವೆ ಇಲಾಖೆ ಅಧಿಕಾರಿಗಳು ಗಡಿ ಗುರುತಿಸಿ ಅಳತೆ ಮಾಡಿಕೊಡುವ ಆದ್ಯಕರ್ತವ್ಯವಾಗಿರುತ್ತದೆ. ಭೂದಾಖಲೆಗಳ ಇಲಾಖೆಯಲ್ಲಿ ಸದರಿ ಜಮೀನಿಗೆ ಸಂಬಂಧಿಸಿದಂತೆ ದಾಖಲೆಗಳು ಶಿಥಿಲಗೊಂಡಿದ್ದರೆ, ಎದುರುದಾರರು ಮೇಲಾಧಿಕಾರಿಗಳ ಅನುಮತಿ ಪಡೆದು ಪುನ: ದಾಖಲೆಗಳನ್ನು ಸೃಷ್ಟಿಮಾಡಿಕೊಂಡು ಅಳತೆ ಮಾಡಿಕೊಡಬೇಕಾಗುತ್ತದೆ. ಎದುರುದಾರರು ದಾಖಲೆಗಳು ಶಿಥಿಲಗೊಂಡಿದ್ದರಿಂದ ಅಳತೆ ಮಾಡಲು ಅವಕಾಶವಾಗಿಲ್ಲವೆಂದು ತಿಳಿಸಿ ದೂರುದಾರರಿಗೆ ಹಿಂಬರಹ ನೀಡಿರುತ್ತಾರೆ. ಕಾರಣ ಎದುರುದಾರರು ಯಾವುದೇ ಕರ್ತವ್ಯಲೋಪವನ್ನು ಎಸಗಿರುವುದು ಕಂಡುಬರುವುದಿಲ್ಲ. ಆದರೆ ಎದುರುದಾರರು ಸದರಿ

ಜಮೀನಿನ ದಾಖಲೆಗಳನ್ನು ತಯಾರಿಸಿಕೊಂಡು ಅಳತೆ ಮಾಡಿಕೊಡಬಹುದಾಗಿತ್ತು. 3ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಭೂಮಾಪಕರಾದ ಹೇಮರಾಜು ಅವರಿಗೆ ಕಡತವನ್ನು ನೀಡಿ ಮತ್ತೊಮ್ಮೆ ಸಂಪೂರ್ಣವಾಗಿ ಪರಿಶೀಲಿಸಿ ವರದಿ ಸಲ್ಲಿಸಲು ತಿಳಿಸಿರುತ್ತಾರೆ. ವರದಿ ಸಲ್ಲಿಸಿದ ನಂತರ ಸರ್ವೆ ಮಾಡುವ ಕ್ರಮವಹಿಸುವುದಾಗಿ ತಿಳಿಸಿರುತ್ತಾರೆ.

7. ಆದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಎದುರುದಾರರಿಗೆ ದೂರುದಾರರ ಜಮೀನನ್ನು ಅಳತೆ ಮಾಡಿ ಗಡಿ ಗುರುತಿಸಿ ನಕ್ಷೆಯನ್ನು ಪೂರೈಸಲು ನಿರ್ದೇಶಿಸಲು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

8. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ವರದಿ ಸಲ್ಲಿಸಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

[ ನ್ಯಾಯಮೂರ್ತಿ ಸುಭಾಷ್ ಬಿ ಆಡಿ]
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ.

11/1/18